ಮೇಲಿಟ್ಟ ಕ್ಷಣಾರ್ಧದಲ್ಲಿ ಸದಾನ ಕಿಸೆಯಲ್ಲಿದ್ದ ಮೊಬೈಲು ಕಂಪಿಸಿತ್ತು. ತೆಗೆದು ನೋಡಿದ. ಅವಳೇ! 'ವೇರ್ ಆರ್ ಯೂ' ಜತೆಗೆ ಒಂದು ಸ್ಮೈಲಿ ಚಿಹ್ನೆ. ಆ ಸ್ಮೈಲಿ ಚಿಹ್ನೆಯ ಕದಪುಗಳಲ್ಲಿನ ತಿಳಿಗೆಂಪನ್ನು ನೋಡಿದ್ದೇ ಅವನಲ್ಲಿನ ಗೊಂದಲಗಳೆಲ್ಲ ಆ ಕ್ಷಣಕ್ಕೆ ಸರಕ್ಕನೆ ಮಾಯವಾದಂತಾಯ್ತು. ಆ ಚಿಹ್ನೆಯ ಮೇಲೆ ಅಕಾರಣ ಉಕ್ಕಿದ ಅಕ್ಕರೆಯಿಂದ ಹುಟ್ಟಿದ ಉಮೇದಿಯಲ್ಲಿ ಸದಾ ನೇರವಾಗಿ ಕರುಣಾ ಕುಳಿತಿದ್ದಲ್ಲಿಗೇ ನಡೆದ.

ಸದಾನನ್ನು ನೋಡಿದ್ದೇ ಕರುಣಾ ಗುರುತು ಹಿಡಿದು 'ಓ... ಹಾಯ್... ಬನ್ನಿ... ಬನ್ನಿ... ಈಗಷ್ಟೆ ಮೆಸೇಜ್ ಮಾಡ್ತಿದ್ದೆ ನಿಮಗೆ...' ಹೀಗೆ ಏನೇನೋ ಅರ್ಧಮರ್ದ ಹೇಳುತ್ತ ಸರಕ್ಕನೇ ಕೂದಲನ್ನು ಕಿವಿ ಹಿಂದೆ ಸರಿಸಿಕೊಂಡು ಕೈ ನೀಡಿದಳು. 'ಹಾಯ್... ಆರಾಮಾ?' ಎಂದು ತಾನೂ ನಗುತ್ತಲೇ ಕೈ ಕುಲುಕಿದ ಅವನಿಗೆ ಹಸ್ತ ಬಿಡಿಸಿಕೊಳ್ಳುವಾಗ ಅವಳ ಬೆರಳಿನ ಕಿರು ಉಂಗುರ ಹೆಬ್ಬೆರಳಿಗೆ ಸೋಕಿತು.

ಮುಖಾಮುಖಿ ಕೂತ ಕೆಲವೇ ಕ್ಷಣಗಳಲ್ಲಿ ವೇಟರ್ ಪ್ರತ್ಯಕ್ಷನಾದ. 'ಟೂ ಕಾಫಿ' ಎಂದು ಪ್ರಶ್ನಾರ್ಥಕವಾಗಿಯೇ ಹೇಳಿ ಕರುಣಾ ಸದಾನತ್ತ ನೋಡಿದಳು. ಅವನು ತಲೆ ಆಡಿಸಿದ. ವೇಟರ್ ಅತ್ತ ಹೋಗಿದ್ದೇ ಕುರ್ಚಿ ಕೊಂಚ ಮುಂದೆ ಎಳೆದುಕೊಂಡು ಮೊಬೈಲನ್ನು ಟೇಬಲ್ಲಿಗೆ ತುಂಬ ಲಘುವಾಗಿ ಕುಟ್ಟುತ್ತಾ 'ಸೋ...' ಎಂದು ಕೊಂಚ ಎಳೆದು ನಕ್ಕುಬಿಟ್ಟಿದ್ದಳು. ಆ ನಗುವಿನಲ್ಲಿ ಕೊಂಚ ನಾಚಿಕೆಯೂ ವಾತಾವರಣವನ್ನು ಮುಂದಿನ ಮಾತಿಗೆ ಸಜ್ಜುಗೊಳಿಸುವ ಸಲಿಗೆಯೂ ಇತ್ತು. ಮತ್ತೆ ಗಂಭೀರತೆಯನ್ನು ನಟಿಸುತ್ತಾ 'ನಾವು ಮಾತಾಡಿಕೊಳ್ಳೂದು ಮುಖ್ಯ ಅನಿಸ್ತು ನಂಗೆ' ಎಂದಳು. 'ನಿಜ ನಿಜ' ಎಂದ.

'ಅಂದಹಾಗೆ ನೀವು ಎಲ್ಲಿ ಕೆಲಸ ಮಾಡ್ತಿರೋದು ಅಂದ್ರಿ?' ಕೇಳಿದಳು. ಆ ಪ್ರಶ್ನೆಯಲ್ಲಿನ ನಾಟಕೀಯತೆಯನ್ನು ಮನಸಾ ಆಸ್ವಾದಿಸುತ್ತಾ 'ನಾನು ಹೇಳಿಲ್ವಲ್ಲಾ?...' ಎಂದು ನಕ್ಕ. 'ಸೋ ಫನ್ನಿ' ಎಂದು ಅವಳೂ ನಗುವಿಗೆ ಜತೆಯಾದಳು. ಅಷ್ಟೊತ್ತಿಗೆ ಕಾಫಿ ಬಂತು. ಕಾಫಿ ಬಟ್ಟಲನ್ನು ಬೆರಳಿನಿಂದ ನಿಧಾನ ತಿರುಗಿಸುತ್ತಾ ನಗುವನ್ನು ಮುಂದುವರಿಸುತ್ತಲೇ 'ಆಕ್ಚುಲಿ ನಾ ಎಲ್ಲೂ ಕೆಲಸಕ್ಕಿಲ್ಲ' ಎಂದ. ಒಮ್ಮೆಲೇ ನಗು ನಿಲ್ಲಿಸಿ ಅವನ ಮುಖ ದಿಟ್ಟಿಸಿ, ಮತ್ತೆ ಚೇತರಿಸಿಕೊಂಡು ಜೋಕು ಕೇಳಿದವಳಂತೆ ನಕ್ಕಳು. ನಂತರ 'ಸುಮ್ನೆ ಕೇಳಿದೆ ಅಷ್ಟೆ. ಕೆಲ್ಸ ಗಿಲ್ಸ ಎಲ್ಲ ಸೆಕೆಂಡರಿ ನಂಗೆ. ಒಳ್ಳೆ ಕಂಪ್ಯಾನಿಯನ್ ಬೇಕು. ಸಂಬಂಧ ಮುಖ್ಯ' ಎಂದು ಸಾಧ್ಯವಿದ್ದಷ್ಟೂ ಧ್ವನಿಯಲ್ಲಿ ಮಧುರಭಾವವನ್ನು ತುಂಬುತ್ತ ಕಾಫಿ ಕೈಗೆತ್ತಿಕೊಂಡು ಕಡೆಗಣ್ಣಲ್ಲೇ ಸದಾನನ್ನು ನೋಡಿದಳು. ಅದನ್ನು ಗಮನಿಸದವನಂತೆ ಒಂದು ಸಿಪ್ ಹೀರಿದ ಸದಾ ಗಂಭೀರವಾಗಿ 'ನೀವು ಹೇಳಿದ್ದು ನಿಜ. ಆದ್ರೆ ನಾನು ಹೇಳಿದ್ದೂ ಅಷ್ಟೇ ನಿಜ. ನಂಗೆ ಜಾಬ್ ಇಲ್ಲ. ಹಳ್ಳಿಯ ಮನೆಯಲ್ಲಿರುವ ಹುಡುಗ ಅಂದ್ರೆ ಯಾವ ಹೆಣ್ಮಕ್ಕಳೂ ಮದ್ವೆಗೆ ತಯಾರಾಗುವುದಿಲ್ಲ ಅಂತ ಹೇಳಿ ಅಪ್ಪ ಅಮ್ಮ ಒತ್ತಾಯ ಮಾಡಿ ಬೆಂಗಳೂರಿನಲ್ಲಿ ಇರಿಸಿದ್ದಾರೆ. ನಾನು ಯಾವುದೋ ಕಂಪೆನಿಯಲ್ಲಿ ಒಳ್ಳೆ ಸಂಬಳದ ಕೆಲಸ ಮಾಡ್ತಿದ್ದೀನಿ ಅಂತ ಹೇಳಿ ಸುಳ್ಳು ಹೇಳಿದ್ದಾರೆ. ಮತ್ತೆ ನಾನು ಬಹಳ ದಿನ ಬೆಂಗಳೂರಿನಲ್ಲಿರಲಾರೆ. ಊರಿಗೇ ಹೋಗುವವನು...' ಸದಾ ಬಡಬಡ ಎಲ್ಲ ಒದರಿ ಎರಡು ಸಲ ಕೆಮ್ಮಿದ. ಕರುಣಾ ಕಾಫಿ ಕಪ್ ಕೆಳಗಿಟ್ಟು ರಸ್ತೆ ನೋಡುತ್ತಿದ್ದಳು. ಕಣ್ಣು ತೆಳ್ಳಗೆ ಒದ್ದೆಯಾಗಿದ್ದು ನೋಡಿ ಸದಾನಿಗೂ ಯಾಕೋ ಕತ್ತು ಬಿಗಿದಂತಾಯಿತು. ಸುಮ್ಮನಾದ. ರಸ್ತೆಯ ವಾಹನಗಳ ಸದ್ದು ವಿಕಾರ ಕೇಳಿಸುತ್ತಿತ್ತು. ಕಾಫಿ ಡೇ ಎದುರಿಗೆ ಹುರಿದ ಶೇಂಗಾ ಮಾರುವ ಹುಡುಗ ಕಾವಲಿಗೆ ಸೌಟನ್ನು ಬಡಿಯುತ್ತಿರುವ ಟಣ್ ಟಣ್ ಸದ್ದು ತಲೆಗೆ ಹೊಡೆದಂತೆ ಕೇಳುತ್ತಿತ್ತು.